# ಗೇಮ್ ಚೇಂಜಿಂಗ್ ಪಾತ್ರಗಳತ್ತ ರಚನಾ ಚಿತ್ತ



‘ಲವ್ ಮಾಕ್ಟೇಲ್’, ‘ಹರಿಕಥೆ ಅಲ್ಲ ಗಿರಿಕಥೆ’, ‘ಲವ್ 360’, ‘ತ್ರಿಬಲ್ ರೈಡಿಂಗ್’, ‘ನಾಟ್‌ಔಟ್’ ಸಿನಿಮಾಗಳಿಗೆ ಬಣ್ಣ ಹಚ್ಚಿರುವ ನಟಿ ರಚನಾ ಇಂದರ್ ಇದೀಗ ‘ಫೈರ್ ಫ್ಲೈ’ ಹಾಗೂ ‘ನಾನು ಮತ್ತು ಗುಂಡ 2’ ಸಿನಿಮಾಗಳಲ್ಲಿ ಅಭಿನಯಿಸುತ್ತಿದ್ದಾರೆ.

‘ಫೈರ್ ಫ್ಲೈ’ ಸಿನಿಮಾದಲ್ಲಿ ನೇಹಾ ಎಂಬ ಪಾತ್ರದಲ್ಲಿ ಕಾಣಿಸಿಕೊಳ್ಳುತ್ತಿದ್ದು, ಇಂಥ ಇನ್ನಷ್ಟು ಪಾತ್ರಗಳನ್ನು ನಿಭಾಯಿಸುವ ಅಭಿಲಾಷೆ ಇರುವುದಾಗಿಯೂ ಹೇಳಿಕೊಂಡಿದ್ದಾರೆ. ಜೊತೆಗೆ ತಾವು ಪಾತ್ರಗಳನ್ನು ಆರಿಸಿಕೊಳ್ಳುವ ರೀತಿಯ ಕುರಿತು ಮಾತನಾಡಿದ್ದಾರೆ.

‘ಪ್ರತಿ ಪಾತ್ರ ಕೂಡ ನಟನೆಯ ಬೇರೆ ಬೇರೆ ಆಯಾಮಗಳನ್ನು ನನಗೆ ಕಲಿಸುತ್ತಿದೆ. ನಾನಿನ್ನೂ ಚಿಕ್ಕವಳು. ಪ್ರತಿಯೊಂದು ಪ್ರಾಜೆಕ್ಟ್‌ನಲ್ಲೂ ಹೊಸತನ್ನು ಕಲಿಯುತ್ತಿದ್ದೇನೆ. ನನ್ನ ಅತ್ಯುತ್ತಮ ಆಯಾಮ ನಾನಾಗಲು ಪ್ರಯತ್ನಿಸುತ್ತಲೇ ಇರುತ್ತೇನೆ’ ಎಂದಿದ್ದಾರೆ.

ಪಾತ್ರಗಳ ಆಯ್ಕೆಯಲ್ಲಿ ತಮ್ಮ ಆದ್ಯತೆ ಯಾವುದಾಗಿರುತ್ತದೆ ಎಂಬ ವಿಷಯವನ್ನು ಹಂಚಿಕೊಂಡಿರುವ ಅವರು, ‘ನಾನು ಪುನರಾವರ್ತಿತ ಆಗಬಾರದು ಎಂಬುದು ನನ್ನ ಮೊದಲ ಆದ್ಯತೆ. ನೋಡುಗರೊಂದಿಗೆ ಎಂಗೇಜಿಂಗ್ ಆಗಿರುವ ಪಾತ್ರಗಳನ್ನು ಒಪ್ಪಿಕೊಳ್ಳುತ್ತೇನೆ. ನಿರ್ದೇಶಕರು ಹೇಗೆ ನನ್ನ ಪಾತ್ರವನ್ನು ಚಿತ್ರಿಸುತ್ತಾರೆ, ನನ್ನನ್ನು ಸಿನಿಮಾದಲ್ಲಿ ಯಾವ ರೀತಿ ಬಿಂಬಿಸುತ್ತಾರೆ ಎಂಬುದನ್ನು ಆಧರಿಸಿ ಅಂತಿಮವಾಗಿ ಪರಿಗಣಿಸುತ್ತೇನೆ. ನಾನು ಮಾಡುವ ಪಾತ್ರ ದೊಡ್ಡದು ಅಥವಾ ಸಣ್ಣದು ಎಂಬುದು ವಿಷಯವಾಗುವುದಿಲ್ಲ. ಜನರೊಂದಿಗೆ ಎಂಗೇಜಿಂಗ್ ಆಗಿರಬೇಕೆಂದು ಯೋಚಿಸುತ್ತೇನೆ’ ಎಂದಿದ್ದಾರೆ.

ಕನ್ನಡ ಸಿನಿಮಾರಂಗದಲ್ಲಿನ ಬದಲಾವಣೆಯ ಬಗ್ಗೆಯೂ ಮಾತನಾಡಿರುವ ಅವರು, ‘ಸಿನಿಮಾ ಚಿತ್ರಕಥೆಗೆ ಸಂಬಂಧಿಸಿದಂತೆ ಒಂದು ಮುಖ್ಯ ಬದಲಾವಣೆ ಕಾಣುತ್ತಿದೆ. ಇಂದು ಮಹಿಳೆಯರಿಗೆ ಗೇಮ್ ಚೇಂಜಿಂಗ್ ರೋಲ್‌ಗಳು ಸಿಗುತ್ತಿವೆ. ಇದೇ ಕಾರಣಕ್ಕೆ ಹೆಚ್ಚಿನ ಸಂಖ್ಯೆಯಲ್ಲಿ ಮಹಿಳಾ ಕಲಾವಿದರು ಬರುತ್ತಿದ್ದಾರೆ. ಇದು ಹೊಸಬರಿಗೆ ಮತ್ತಷ್ಟು ಎಕ್ಸ್‌ಪ್ಲೋರ್ ಆಗಲು ಅವಕಾಶವಾಗಿದೆ’ ಎಂದು ಹೇಳಿದ್ದಾರೆ.

ಈಚೆಗೆ ಎಂಬಿಎ ಶಿಕ್ಷಣವನ್ನೂ ಮುಗಿಸಿರುವ ಅವರು, ತಮ್ಮ ಗುರಿ ಈಗೇನಿದ್ದರೂ ಸಿನಿಮಾ ಮಾತ್ರ ಎಂದಿದ್ದಾರೆ. ‘ನಾನು ಲವ್ ಮಾಕ್ಟೇಲ್ ಸಿನಿಮಾದಿಂದ ಸಿನಿಮಾ ಕರಿಯರ್ ಆರಂಭಿಸಿದೆ. ಆದರೆ ಶಿಕ್ಷಣ ಎನ್ನುವುದು ಮುಖ್ಯವಾಗಿತ್ತು. ಯಾವುದನ್ನೇ ನನ್ನ ಪ್ಯಾಷನ್ ಆಗಿ ತೆಗೆದುಕೊಂಡರೂ ನನ್ನ ಓದು ಸಂಪೂರ್ಣಗೊಳಿಸಬೇಕೆಂದು ನನ್ನ ಕುಟುಂಬ ಬಯಸಿತ್ತು. ಹೀಗಾಗಿ ಶಿಕ್ಷಣ ಮುಗಿಸಿದ್ದೇನೆ. ಈಗೇನಿದ್ದರೂ ನನ್ನ ಗಮನ ಸ್ಕ್ರಿಪ್ಟ್ ಹಾಗೂ ಸಿನಿಮಾಗಳತ್ತ’ ಎಂದು ನಗು ಹರಿಸಿದ್ದಾರೆ.

## ‘ಭೈರತಿ ರಣಗಲ್’ ಲುಕ್



ಸಾಲು ಸಾಲು ಸಿನಿಮಾಗಳಲ್ಲಿ ಬ್ಯುಸಿಯಾಗಿರುವ ನಟ ಶಿವರಾಜ್ ಕುಮಾರ್ ಅಭಿನಯದ ಬಹುನಿರೀಕ್ಷಿತ ಚಿತ್ರ ‘ಭೈರತಿ ರಣಗಲ್’ ಇದೇ ಸೆಪ್ಟೆಂಬರ್ ತಿಂಗಳಿನಲ್ಲಿ ತೆರೆಗೆ ಬರಲು ಸಜ್ಜಾಗಿದ್ದು, ಈಚೆಗಷ್ಟೇ ಸಿನಿಮಾದ ಶೀರ್ಷಿಕೆ ಗೀತೆ ಬಿಡುಗಡೆಗೊಂಡಿದೆ.

ನರ್ತನ್ ಹಾಗೂ ಶಿವಣ್ಣ ಅವರ ಕಾಂಬಿನೇಶನ್‌ನಲ್ಲಿ ಬಂದಿದ್ದ ‘ಮಫ್ತಿ’ ಚಿತ್ರದ ಪ್ರೀಕ್ವೆಲ್ ಆಗಿರುವ ‘ಭೈರತಿ ರಣಗಲ್’ ಸೆಪ್ಟೆಂಬರ್‌ನಲ್ಲಿ ತೆರೆಗೆ ಬರಲಿದೆ ಎಂದು ಚಿತ್ರತಂಡ ಮಾಹಿತಿ ನೀಡಿದೆ. ಲುಂಗಿ, ಕಪ್ಪು ಅಂಗಿಯಲ್ಲಿ ರಗಡ್ ಆಗಿ ಕಾಣಿಸಿಕೊಂಡಿರುವ ಶಿವರಾಜ್‌ಕುಮಾರ್ ಅವರಿಗೆ ನಾಯಕಿಯಾಗಿ ರುಕ್ಮಿಣಿ ವಸಂತ್ ಅಭಿನಯಿಸಿದ್ದಾರೆ. ಈ ಸಿನಿಮಾದಲ್ಲಿ ಶಿವಣ್ಣ ವಕೀಲನಾಗಿ ಕಾಣಿಸಿಕೊಳ್ಳುತ್ತಿರುವುದಾಗಿ ಚಿತ್ರತಂಡ ಸುಳಿವು ನೀಡಿದೆ.

ಗೀತಾ ಪಿಕ್ಚರ್ಸ್ ಲಾಂಛನದಲ್ಲಿ ಗೀತಾ ಶಿವರಾಜ್‌ಕುಮಾರ್ ಅವರು ನಿರ್ಮಿಸಿರುವ ಚಿತ್ರವನ್ನು ನರ್ತನ್ ನಿರ್ದೇಶಿಸಿದ್ದಾರೆ. ‘ಉತ್ತರಕಾಂಡ’ ಸಿನಿಮಾ, ಹೇಮಂತ ರಾವ್ ನಿರ್ದೇಶನದ ‘ಭೈರವನ ಕೊನೆ ಪಾಠ’ ಸಿನಿಮಾದಲ್ಲಿಯೂ ಶಿವಣ್ಣ ತೊಡಗಿಕೊಂಡಿದ್ದು, ಅಭಿಮಾನಿಗಳ ನಿರೀಕ್ಷೆ ಹೆಚ್ಚಿಸಿದೆ.